ಅಲ್ಲಾ ಬಕಷ್, ಮಧುಗಿರಿ
*ಮೋದಿ ಗಾಳಿಯೆನ್ನುವವರು ಮೋದಿಯವರನ್ನು ಫ್ಯಾನ್ ಜಾಹೀರಾತಿಗೇಕೆ ಬಳಸಿಕೊಳ್ಳುತ್ತಿಲ್ಲ?*



ಯೋಚನೆ ಇತ್ತಂತೆ; ಅಷ್ಟರಲ್ಲಿ ಮೋದಿಯ ಫ್ಯಾನ್‌ಗಳೇ ಮೋದಿಯ ಬಗ್ಗೆ ಜಾಹೀರಾತು ನೀಡಿಬಿಟ್ಟವಂತೆ!

ಅಕ್ಷಯ ಜೈನ್, ಬಳ್ಳಾರಿ
*ಕೆಂಪು ಯಾವಾಗಲೂ ಡೇಂಜರ್ ಅಂತ ಗೊತ್ತಿದ್ದರೂ ಊಟಕ್ಕೆ ಉಪ್ಪಿನಕಾಯಿ ಏಕೆ ಹಾಕುತ್ತಾರೆ ರಾಮ್?*
ಊಟದ ವಿಷಯದಲ್ಲಿ ಮೊಸರನ್ನದೊಡನೆ ಅದರ ಜೋಡಿಯಾದ್ದರಿಂದ ಅದು ಡೇಂಜರ್ ಸಿಗ್ನಲ್ ಅಲ್ಲ, ಸ್ವಾಪ್ ಸಿಗ್ನಲ್!

ಕುಬೇರಪ್ಪ ಎಂ. ವಿಭೂತಿ, ಹರಿಹರ
*ನಮ್ಮ ನಮ್ಮ ಹಣೆಬರಹ ನಾವೇ ಬರೆದುಕೊಳ್ಳುವ ಹಾಗಿದ್ದಿದ್ದರೆ ಏನಾಗುತ್ತಿತ್ತು?*
ಬರೆದುಕೊಳ್ಳಬಹುದಾಗಿತ್ತು; ಆದರೆ ಲಿಪಿ ಗೊತ್ತಿಲ್ಲವಾದ್ದರಿಂದ ಬರೆದದ್ದನ್ನು ಓದಲಾಗುತ್ತಿರಲಿಲ್ಲ!

ಡ್ವೈರಿ ವಿಶ್ವನಾಥ್, ಬೆಂಗಳೂರು
*ಮಾನವನಿಗೆ ಕೊಬ್ಬಿರಬೇಕಾ?*
ಹೌದು. ಮಾಂಸಾಹಾರಿ ಮಾನವನಿಗೆ ಕುರಿ ಕೊಬ್ಬಿರಬೇಕು!

ಆರೆಚ್ ಹಾಲಾಡಿ, ಹಾಲಾಡಿ
*ಹೆಣ್ಣನ್ನು ಕಂಡ ಕ್ಷಣ ತಲೆ ಕೆಳಗೆ ಹಾಕ್ತಾನೆ; ಅವನೆಂತವ?*



ಲೇಡೀಸ್ ಫುಟ್‌ವೇರ್ ತಯಾರಕ!

ಶೀಲಾ ಸತ್ಯೇಂದ್ರಸ್ವಾಮಿ, ಹರವೆಮಠ
*ಇಷ್ಟೊಂದು ಜನಪ್ರಿಯರಾಗಿದ್ದೀರಿ, ಚುನಾವಣೆಗೆ ನಿಲ್ಲಬಾರದೆ?*
ಅಂತೂ ನನಗೆ ಇಂಕ್ ಹಾಕಿ, ಕಪಾಳಕ್ಕೆ ಹೊಡೆದು, ಚಪ್ಪಲಿ ತೂರಿದರೆ ನಿಮಗೆ ನೆಮ್ಮದಿ ಎನ್ನಿ!

ಎಂ.ಮೃತ್ಯುಂಜಯಪ್ಪ, ಚಿತ್ರದುರ್ಗ
*ರಾಂಜೀ, ಅಯೋಧ್ಯೆ, ದ್ವಾರಕೆ ಎಲ್ಲವೂ ಹೊಟೆಲ್‌ಗಳಾಗಿವೆ. ಹಾಗಾದರೆ ನಮ್ಮ ರಾಮ, ಕೃಷ್ಣರೆಲ್ಲಿ?*
ಅಲ್ಲೆಲ್ಲ ಊಟ ಮಾಡಿದ್ದರಿಂದ ದೇವಲೋಕದಲ್ಲಿ; ಧನ್ವಂತರಿಯ ಬಳಿ!

ಎಚ್.ಜಿ. ಜಗದೀಶ್, ಮೈಸೂರು
*ಸತ್ಯ ಯಾವಾಗಲೂ ನಗ್ನ; ಏಕೆ ರಾಂಜೀ?*
ಸತ್ಯ, ಅಸತ್ಯ ಎರಡೂ ಒಂದು ನದಿಯಲ್ಲಿ ಸ್ನಾನಕ್ಕಿಳಿದವು. ಅಸತ್ಯ ಮೊದಲು ಸ್ನಾನ ಮುಗಿಸಿ ಸತ್ಯದ ಉಡುಪನ್ನೂ ಧರಿಸಿ ಹೋಯಿತು!

ಮಹಾವೀರ ಕಾಸರ, ಚನ್ನಗಿರಿ
*ಕುದುರೆ ಬಾಲಕ್ಕೆ ಕಟ್ಟಿದ ದುಡ್ಡು ಮರಳಿ ಬರುವುದೆ?*
ಊಹೂಂ; ಮರಳಿ ಮರಳಿ ಆವಿಯಾಗಿ ಹೋಗಿ ಬಿಡುವುದು!

ನವಿರವಿ, ಬಾಳೆಹೊನ್ನೂರು
*ರಾಮ್, ಚೆನ್ನಾಗಿದ್ದೀರಾ? ಏನು ಸಮಾಚಾರ? ಇದೇ ನನ್ನ ಪ್ರಶ್ನೆ. ನಿಮ್ಮ ಉತ್ತರ ಏನು?*
ಕನ್ನಡಿ ನೋಡಿದಾಗ ಅಷ್ಟೇನೂ ಚೆನ್ನಾಗಿಲ್ಲ. ಸದಾಚಾರ ಎಲ್ಲೂ ಕಾಣುತ್ತಿಲ್ಲ ಎನ್ನುವುದೇ ಸಮಾಚಾರ!

ಎಂ.ಎಸ್. ಧರ್ಮೇಂದ್ರ, ದೊಡ್ಡಮಗ್ಗೆ
*ಚಿಂತಕರಿಗೂ, ಹಂತಕರಿಗೂ ಏನು ವ್ಯತ್ಯಾಸ?*
ಚಿಂತಕರದು ಮಥನಕ್ಕೆ ದಾರಿ, ಹಂತಕರದು ಮಸಣಕ್ಕೆ ದಾರಿ!

ಪಿ. ಶಂಕರಪ್ಪ, ಶಿವಮೊಗ್ಗ
*ಯಾವುದೇ ರೀತಿಯ ಕೆಲಸ ಮಾಡದೆ ಎಲ್ಲಾ ರೀತಿಯ ಗೌರವ, ದುಡ್ಡು, ಸುಖ, ಸಂತೋಷ ಮತ್ತು ಪ್ರಚಾರ ಸಿಗುವ ಸ್ಥಳ ಯಾವುದು?*
ನಿತ್ಯಾನಂದನಂತಹವರ ಆಶ್ರಮ!

ಎಸ್. ಶ್ರೀಧರ್, ಬೆಂಗಳೂರು
*ಪ್ರೇಯಸಿಯ ಜೊತೆಯಲ್ಲಿ ಹೋಗುವಾಗ ಹೆಂಡತಿ ಎದುರು ಬಂದರೆ ಏನಾಗುತ್ತದೆ?*
ಬ್ರೇಕಿಂಗ್ ಸೌಂಡ್, ಬ್ರೇಕಿಂಗ್ ನ್ಯೂಸ್!

ಗೌರಿ ಶೇಷಾದ್ರಿ, ಉತ್ತನಹಳ್ಳಿ
*ದೇಹದ ಯಾವ ಭಾಗದಲ್ಲಿ ಪ್ರೀತಿ ಹುಟ್ಟುತ್ತದೆ?*
ಒಳಭಾಗದಲ್ಲಿ.

## ಬಹುಮಾನಿತ ಪ್ರಶ್ನೆ

ಹಾಡ್ಯ ಬಿ. ಜಯಾನಂದ, ಮೈಸೂರು
*ಗಡಿ ಕಾವಲು ಪಡೆಗೂ, ಕನ್ನಡ ಕಾವಲು ಪಡೆಗೂ ಏನು ವ್ಯತ್ಯಾಸ?*
ಗಡಿ ಕಾವಲು ಪಡೆ ಗಡಿ ಕಾಯಲು ಚಂದಾ ವಸೂಲಿ ಮಾಡುವುದಿಲ್ಲ!

ಅಮರಯ್ಯಾ ಪತ್ರಿಮಠ, ಶೋರಾಪೂರ
*ಕುರುಡು ಕಾಂಚಾಣ ಎನ್ನುವುದೇಕೆ?*
ಕತ್ತಲೆಕೋಣೆಯಲ್ಲಿ/ತಿಜೋರಿಯಲ್ಲಿ ಇದ್ದೂ ಇದ್ದೂ ದೃಷ್ಟಿ ಕಳೆದುಕೊಂಡಿರುತ್ತದಂತೆ!

ಆರ್. ಮಧುಸೂದನ್, ಹಾಸನ
*ಗಂಡನಿಗೆ ಇಲ್ಲದ ಸುಖ ನನಗೂ ಬೇಡ ಎಂದ ಗಾಂಧಾರಿಯಂತಹ ಹೆಂಡತಿ ಈ ಕಾಲದಲ್ಲಿ ಸಿಗಬಹುದಾ?*
ಓ! ಗಂಡನಿಗೆ ಸಿಗದ ಅತ್ತೆಯ ಮನೆಯ ಸುಖ ತನಗೂ ಬೇಡ ಎಂದು ಅತ್ತೆಯ ಮನೆಯನ್ನೇ ತೊರೆದವರು ಇದ್ದಾರಲ್ಲ!

ಪಿ.ಜೆ. ರಾಘವೇಂದ್ರ, ಮೈಸೂರು
*ನ್ಯೂಸ್ ಓದುವವರಿಗೆ ಗ್ರಾಮರ್‌ಗಿಂತ ಗ್ಲಾಮರ್ ಮುಖ್ಯವೆ?*



ಗತ್ಯಂತರವಿಲ್ಲ; ಬುಕ್ಸ್ ಓದದೇ ಇರೋವ್ರಿಗೇ ಲುಕ್ಸೇ ಆಸ್ತಿ!

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ
*ಭರತನಂತೆ ಕಾದು ರಾಮನಿಗೆ ಅಧಿಕಾರ ಹಸ್ತಾಂತರ ಮಾಡುವವರು ಇಲ್ಲವೇ ಇಲ್ಲವಲ್ಲಾ ರಾಂ...?*
ಹಸ್ತದಲ್ಲೇ ಇದ್ದಾರಲ್ಲ! ಹತ್ತು ವರ್ಷ ಕುರ್ಚಿಯಲ್ಲಿ ಕುಳಿತು, ರಾಹುಲನಿಗೆ ಪೀಠ ಬಿಟ್ಟುಕೊಟ್ಟ ಮನಮೋಹನರು!

ಕೆ.ಜಿ. ಶೇಖರಪ್ಪ, ಸಿರಿಗೆರೆ
*ನ್ಯಾಯಯುತವಾಗಿ ಬಾಳುವವರಿಗೆ ನಿಮ್ಮ ಕಿವಿಮಾತು ಹೇಳಿ ಸಾರ್...?*
ಹೆಚ್ಚಿನ ಮುತುವರ್ಜಿಯಿಂದ ನಿಮ್ಮನ್ನು ನೀವೇ ಕಾಪಾಡಿಕೊಳ್ಳಿ; ನಿಮ್ಮದು ವಿನಾಶದ ಅಂಚಿನಲ್ಲಿರುವ ಸಂಕುಲ!

■ ರಾಮ್